ಇದುವರೆಗೂ ಭಾಷೆ ಸ್ಪರ್ಶಿಸದೇ ಉಳಿಸಿದ ವಿಧಾನಗಳಲ್ಲಿ ಮಾಡಿಯಾರು. ಇದಕ್ಕೆ ಸಾಕ್ಷಿಯೆಂಬಂತಿದೆ "ನನ್ನೊಳಗಿನ ಮಲೆನಾಡು" ಎಂಬ ಪುಸ್ತಕ.

ಮಾಹಿತಿ, ಅನುಭವ, ನೆನಪುಗಳು... ಎಂಬ ಅಡಿಪಟ್ಟಿಯೊಂದಿಗೆ ತೊಡಗುವ ಈ ಐನೂರಕ್ಕೂ ಹೆಚ್ಚು ಪುಟಗಳ ಕೃತಿಯ ಮೂಲದಲ್ಲಿ ಒಂದು ಕುಟುಂಬವಿದೆ. ಕುಟುಂಬದ ಹಿರಿಯರು, ಬಂಧು ಬಾಂಧವರು, ಸ್ನೇಹಿತರು, ಹಿತೈಷಿಗಳು ಸೇರಿ ತಮ್ಮ ತಮ್ಮ ಅನುಭವ, ನೆನಪುಗಳಲ್ಲಿ ಅವರವರ ಒಳಗೆ ಬೆಚ್ಚಗೆ ಕುಳಿತ ಊರುಕೇರಿಯನ್ನು ಕಟ್ಟಿಕೊಡುತ್ತಾರಿಲ್ಲಿ. ಹಿರಿಯರಿಂದ ಕೇಳಿದ ಕತೆ, ಅನುಭವ, ನೆನಪುಗಳ ರೋಚಕತೆಯೇ ಕಾರಣವಾಗಿ ಪುಸ್ತಕ ರೂಪದಲ್ಲಿ ಇದೆಲ್ಲ ಬಂದರೆ ಚೆನ್ನ ಎನಿಸಿ ಸುರುವಾದ ಪ್ರಕ್ರಿಯೆ ಈಗ ಪಡೆದಿರುವ ರೂಪ ನೋಡಿದರೆ ಬೆರಗಾಗುತ್ತದೆ; ಇದರಲ್ಲಿ ಏನಿದೆ, ಏನಿಲ್ಲ ಎನ್ನುವಂತಾಗುತ್ತದೆ. ಇಲ್ಲಿ ಬರೆದ ಬಹುತೇಕರಿಗೆ ಇದೇ ಪುಸ್ತಕವೊಂದಕ್ಕೆ ಸೇರಿಕೊಳ್ಳುತ್ತಿರುವ ಮೊತ್ತ ಮೊದಲ ಲೇಖನ. ಹಾಗಾಗಿ ಇಲ್ಲಿ ಒಂದು ಅಸಾಹಿತ್ಯಿಕ ವಾತಾವರಣದ ಸಹಜತೆ, ತಾಜಾತನ ಮತ್ತು ಆತ್ಮೀಯ ಮಾತುಕತೆಯ ನೆಲೆ, ಸೆಲೆ ಕೂಡ ಇದೆ. ಇಲ್ಲಿನ ಪುಟ ಪುಟವೂ ಜೀವಂತಿಕೆಯಿಂದ ಉಸಿರಾಡುತ್ತಿರುವಂತಿದೆ.

ಹಾಗೆ ನೋಡಿದರೆ ಕನ್ನಡದಲ್ಲಿ ಮಲೆನಾಡಿನ ಕುರಿತೇ ಬಂದ ಪುಸ್ತಕಗಳು ಹೆಚ್ಚೇನೂ ಇಲ್ಲ. ಮಲೆನಾಡನ್ನು ಪರೋಕ್ಷವಾಗಿ ತಮ್ಮ ಕತೆ, ಕಾದಂಬರಿಗಳಲ್ಲಿ ಕಟ್ಟಿಕೊಟ್ಟ ಕುವೆಂಪು, ಕಾರಂತ, ತೇಜಸ್ವಿಯವರನ್ನು ಬಿಟ್ಟರೆ ತ್ಯಾನಂದೂರು ವೈ ಎಸ್ ಪುಟ್ಟಣ್ಣನವರ "ನಾ ಕಂಡ ಮಲೆನಾಡು" ಬಹುಶಃ ಅಂಥ ಏಕೈಕ ಪುಸ್ತಕವೆನ್ನಬಹುದು. ಈಗ ಗಿರಿಮನೆ ಶ್ಯಾಮರಾವ್ ಅವರು "ಮಲೆನಾಡಿನ ರೋಚಕ ಕತೆಗಳು" ಎಂಬ ಸರಣಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ನಾ. ಡಿಸೋಜ, ಅಬ್ದುಲ್ ರಶೀದ್, ಶ್ರೀಧರ ಬಳಗಾರ, ಅಲಕಾ ತೀರ್ಥಹಳ್ಳಿ ಮುಂತಾದ ಹಲವರ ಕತೆ, ಕಾದಂಬರಿಗಳನ್ನು ಓದುವಾಗ ಕೂಡ ಮಲೆನಾಡಿನ ದಟ್ಟ ಚಿತ್ರವೊಂದು ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಲ್ಲುತ್ತದೆ. ಇಂಥ ಕೆಲವು ಅಪೂರ್ವ ಕೃತಿಗಳ ಒಂದು ಪಟ್ಟಿಯನ್ನು ಕೂಡ ಈ ಪುಸ್ತಕ ಒಳಗೊಂಡಿದೆ.

ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಿಂದ ಜೈನ ಕಾವ್ಯಗಳ ಅಧ್ಯಯನದಲ್ಲಿ ಎಂ.ಫಿಲ್ ಪದವಿಯನ್ನು ಪಡೆದಿರುವ, ಪ್ರಸ್ತುತ ಪಿಎಚ್.ಡಿ. ಅಧ್ಯಯನ ನಡೆಸುತ್ತಿರುವ ಸೌಮ್ಯ ಅರುಣ ಕುಮಾರ್ ಈ ಕೃತಿಯ ಸಂಪಾದಕರು. ಇವರ ಸಾಹಿತ್ಯಿಕ ಹಿನ್ನೆಲೆ ಕುತೂಹಲಕರವಾಗಿದೆ. ಆದರೆ ಯಾವುದೇ ಸಾಹಿತ್ಯಿಕ ಅಥವಾ ಕೃತಿನಿಷ್ಠ ಮಹತ್ವಾಕಾಂಕ್ಷೆಗಳಿಲ್ಲದೇ ರೂಪುಗೊಂಡಿರುವ, ಈ ಕೃತಿಯ ಮೇಲೆ ಬೆಲೆಯನ್ನಾಗಲೀ, ಪ್ರತಿಗಳನ್ನು ತರಿಸಿಕೊಳ್ಳಲು ಅನುಕೂಲವಾಗುವಂಥ ವಿಳಾಸವನ್ನಾಗಲೀ ಮುದ್ರಿಸಿಯೇ ಇಲ್ಲ. ಅಂದರೆ ಅಷ್ಟರಮಟ್ಟಿಗೆ ಇದು ವಾಣಿಜ್ಯಿಕವಾಗಿ ಸೀಮಿತ ಉದ್ದೇಶದ ಕೃತಿ. ನನ್ನ ಕೈಸೇರಿದ ಪ್ರತಿಗೂ ನಾನು ಹಣ ತೆತ್ತಿಲ್ಲ. ಹಾಗಿದ್ದೂ ಇದರಲ್ಲಿ ಅಡಕವಾಗಿರುವ ವಿಷಯ ವಿಸ್ತಾರದ ಅಂದಾಜು ಸಿಗಲೆಂದು ಇಲ್ಲಿನ ವಿಭಾಗಗಳ ಪಟ್ಟಿ ಮಾಡುತ್ತೇನೆ, ನೋಡಿ: ಕವನಗಳು, ನೆನಪು ಅನುಭವ, ಕೃಷಿ ಮತ್ತು ಪರಿಸರ, ವೈದ್ಯಕೀಯ, ಮಲೆನಾಡಿನ ರಸ್ತೆಗಳು, ವ್ಯಕ್ತಿ ಪರಿಚಯ, ಅಡುಗೆ, ಹಬ್ಬಗಳು ಮತ್ತು ಹಾಡು ಹಸೆ, ಮಲೆನಾಡಿನ ಕುರಿತು ಮತ್ತು ಅದರ ಸುತ್ತಮುತ್ತ ಬಂದಿರುವ ಕತೆ, ಕಾದಂಬರಿ ಇತ್ಯಾದಿ ಕೃತಿಗಳ ಪಟ್ಟಿ, ಮರೆಯಾಗುತ್ತಿರುವ ಪದಕೋಶ. ಇಲ್ಲಿ ಬರುವ ಮಲೆನಾಡು ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಗೂ ವಿಸ್ತರಿಸಿದೆ.

ಇದನ್ನು ಓದಿದ ಮೇಲೆ ನಿಶ್ಚಿತವಾಗಿಯೂ ಪ್ರತಿಯೊಬ್ಬರೂ ತಮ್ಮೊಳಗೆ ಬೆಚ್ಚಗೇ ಕುಳಿತಿರುವ ಆ ತಮ್ಮದೇ ಆದ ಖಾಸಗೀ ಊರನ್ನು ಮುಟ್ಟಿ ನೋಡಿಕೊಳ್ಳದೇ ಇರಲಾರರು. ಒಂದು ಒಳ್ಳೆಯ ಕೃತಿ ಇದಕ್ಕಿಂತ ಹೆಚ್ಚಿನದೇನನ್ನು ಮಾಡಬೇಕಿದೆ! ❖